503(1146)ಶ್ರೀ ಯೋಗೇಶ್ ಭಟ್.ಎಸ್.ವಿಧಾನ ಸಭಾ ಸದಸ್ಯರು (ಮಂಗಳೂರು) ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರಿನ ವಿಶೇಷ ಆರ್ಥಿಕ ವಲಯದ ಅಭಿವೃದ್ಧಿ ಒ.ಎನ್.ಜಿ.ಸಿ.ಯೋಜನೆಯ ಅನುಷ್ಠಾನ (25 ಸಾವಿರ ಕೋಟಿ) ಆಗುವಂತೆ ರಾಜ್ಯ ಸರಕಾರ ಕೈಗೊಂಡ ಕ್ರಮಗಳೇನು; ಈ ಯೋಜನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ರಾಜ್ಯದಲ್ಲಿ ಉಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ. ಮಂಗಳೂರು–ಹಾಸನ ರೈಲ್ವೆ ಬ್ರಾಡ್‌ಗೇಜ್ ಕನ್ವರ್ಷನ್ ಕಾಮಗಾರಿಗಳ ಪೂರ್ಣಗೊಳಿಸಲು, ಮಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯವಾಗಿ ಬೆಳೆಸಲು ರಾಜ್ಯ ಸರ್ಕಾರದ ಕ್ರಮಗಳೇನು; ಬಿಡುಗಡೆ ಮಾಡಬೇಕಾದ ಹಣ ಎಷ್ಟು; ಯಾವಾಗ ಮಾಡಲಾಗುವುದು;

ಶ್ರೀ ಪಿ.ಜಿ.ಆರ್.ಸಿಂಧ್ಯ (ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ. ಮಂಗಳೂರಿನಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಮೆ;ಕೆನರ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್‌ರವರು ಅರ್ಜಿ ಸಲ್ಲಿಸಿದ್ದು, ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರವು ಯೋಜನೆಗೆ ಅನುಮೋದನೆ ನೀಡಿದೆ. ತದನಂತರ ಮೆ; ಆಯಿಲ್ ಮತ್ತು ನ್ಯಾಚುರಲ್ ಗ್ಯಾಸ್ ಕಾರ್ಪೋರೇಷನ್‌ರವರು ಮಂಗಳೂರಿನಲ್ಲಿ ನೈಸರ್ಗಿಕ ಅನಿಲ ಆಮದು ಸ್ಥಾವರ ಮತ್ತು ಇತರೆ ಬೃಹತ್ ಪೆಟ್ರೋ ಕೆಮಿಕಲ್ ಸ್ಥಾವರಗಳನ್ನು ಸ್ಥಾಪಿಸುವ ಬೃಹತ್ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಯೋಜನೆಗಳನ್ನು ಕರಾವಳಿ ವಿಶೇಷ ಆರ್ಥಿಕ ವಲಯದಲ್ಲಿ ಸ್ಥಾಪಿಸುವ ಬಗ್ಗೆ ಹಾಗೂ ಕರಾವಳಿ ವಿಶೇಷ ಆರ್ಥಿಕ ವಲಯ ಯೋಜನೆಗಳನ್ನು ಪಾಲ್ಗೊಳ್ಳುವಿಕೆ ಬಗ್ಗೆ ಒ.ಎನ್.ಜಿ.ಸಿ. ಸಂಸ್ಥೆಯು ಇಚ್ಛೆ ವ್ಯಕ್ತಪಡಿಸಿದ್ದಾರೆ. ಅದರಂತೆ ಮೆ; ಕೆನರ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್, ಮೆ; ಒ.ಎನ್.ಜಿ.ಸಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನಡುವಿನ ಒಂದು ಒಡಂಬಡಿಕೆಯನ್ನು ದಿನಾಂಕ : 30.08.2004ರಂದು ಸಹಿ ಮಾಡಲಾಗಿದೆ. ಯೋಜನೆಯ ಪೂರ್ವಭಾವಿ ಕಾರ್ಯಗಳನ್ನು /ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಪ್ರತ್ಯೇಕವಾಗಿ ಒ.ಎನ್.ಜಿ.ಸಿ./ ಎಂ.ಆರ್.ಪಿ.ಎಲ್ ರವರು ಸಲ್ಲಿಸಿದ ಈ ಕೆಳಕಂಡ ಯೋಜನೆಗಳಿಗೂ ಸಹ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ ವತಿಯಿಂದ ಒಪ್ಪಿಗೆ ನೀಡಲಾಗಿದೆ.

ಕ್ರ. ಸಂ	ಯೋಜನೆ	ಉದ್ದೇಶಿತ ಬಂಡವಾಳ
1	ಪೆಪ್ರೋ ಕೆಮಿಕಲ್ ಮತ್ತು ಆರೋಮ್ಯಾಟಿಕ್ಸ್ ಘಟಕ	7475.00
2	ಅನಿಲ ಆಧಾರಿತ 2000 MW ಶಾಖೋತ್ಪನ್ನ ವಿದ್ಯುತ್ ಘಟಕ	8594.50

3	ನೈಸರ್ಗಿಕ ಅನಿಲ ರಿ–ಗ್ಯಾಸಿಫಿಕೇಷನ್ ಘಟಕ	3950.50
4	ಮಂಗಳೂರು – ಹಾಸನ – ಬೆಂಗಳೂರು ನೈಸರ್ಗಿಕ ಅನಿಲ ಸಾಗಾಣಿಕೆ ಪೈಪೈಲೈನ್ ಘಟಕ	945.00
	ಒಟ್ಟು	**20964.50**

ಆ) ಮಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿಗೊಳಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಜೊತೆಗೂಡಿ ಅಗತ್ಯ ಕ್ರಮಗಳನ್ನು ಜರುಗಿಸಿದೆ. ಎರಡನೇ ರನ್ ವೇ ನಿರ್ಮಾಣ ಕಾರ್ಯಕ್ಕೆ ಒಟ್ಟಾರೆ ಅಗತ್ಯವಿರುವ 186.33 1/2 ಎಕರೆ ಜಮೀನ್ನು AAI ಗೆ ಹಸ್ತಾಂತರಿಸಲಾಗಿದೆ. ವಿಸ್ತಾರಣಾ ಕಾರ್ಯಕ್ಕೆ ಅಗತ್ಯವಿರುವ ಭೂಸ್ವಾಧೀನ ಸಂಬಂಧ ಈಗಾಗಲೇ ರೂ. 11.00 ಕೋಟಿಗಳನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದೆ.

ಹಾಸನ – ಮಂಗಳೂರು ಗೇಜ್ ಪರಿವರ್ತನೆ ಯೋಜನೆಯ ಕಾಮಗಾರಿಯ ಒಟ್ಟು ವೆಚ್ಚ ರೂ. 291ಕೋಟಿ ಆಗಿರುತ್ತದೆ. ಹೆಚ್‌ಎಂಆರ್‌ಡಿಸಿ ಷೇರುದಾರರ ಒಪ್ಪಂದದನ್ವಯ ರಾಜ್ಯ ಸರ್ಕಾರವು ರೂ. 45 ಕೋಟಿ ಈಕ್ವಿಟಿ ನೀಡಬೇಕಾಗಿದೆ. ಈಗಾಗಲೇ ರೂ. 28 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

ಕಾಮಗಾರಿಯ ಚಟುವಟಿಕೆಗಳು ಬಿರುಸಿನಿಂದ ಸಾಗಿರುತ್ತದೆ. 2005ನೇ ಸಾಲಿನ ಮಧ್ಯದಲ್ಲಿ ಈ ಮಾರ್ಗವು ಪೂರ್ಣಗೊಳ್ಳುವ ನಿರೀಕ್ಷೆ ಇದೆ. 2004–05 ನೇ ಸಾಲಿನ ಪೂರಕ ಅನುದಾನದಲ್ಲಿ ರೂ. 17ಕೋಟಿಗಳ ಮೊತ್ತವನ್ನು ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005
(2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 2)

ಕರ್ನಾಟಕ ರಾಜ್ಯಕ್ಕೆ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಅನ್ವಯದ ಸಂಬಂಧದಲ್ಲಿ ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕುಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಕೇಂದ್ರ ಅಧಿನಿಯಮ 36) ಅನ್ವಯಿಸುವ ಸಂಬಂಧದಲ್ಲಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–

(1) ಈ ಅಧಿನಿಯಮವನ್ನು ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.